DECCAN HERALD
Online Newspaper Clipping Service
Dtd- Monday, 26th, March- 2018
Page No. 07

# Multiple agencies for accreditation of institutes

## UGC approves proposal to speed up exercise

Prakash Kumar

**NEW DELHI, DHNS: The Centre is gearing up to engage multiple agencies for quality assessment of the country's higher education institutions and grant of accreditation.**

The University Grants Commission (UGC) has approved a proposal for the registration of assessment and accreditation agencies (AAA) under a regulatory framework to speed up the accreditation exercise.

The UGC regulations, which is pending for the Human Resource Development (HRD) ministry's nod, is expected to involve private agencies along with the top higher education institutions, like the IITs, in the accreditation exercise.

The National Assessment and Accreditation Council (NAAC) and the National Board of Accreditation (NBA), which are the only two approved agencies mandated to accredit the country's universities and colleges, will also come under the ambit of the UGC (recognition and Monitoring of assessment and accreditation agencies) regulations.

"The regulations were approved by the commission at its full commission meeting recently. It has been sent to the HRD ministry for concurrence," official sources told *DH*.

The NAAC has so far accredited about 1,200 colleges and 59 universities out of about 800 universities and 40,000 colleges. The number of technical programmes, assessed and accredited by the NBA is also very less.

"To increase the pace of the accreditation exercise and cover all higher education institutions, the HRD ministry wanted to bring in multiple agencies. Some of the IITs have come forward to join the move. Once the regulations are notified, the commission will start the process for registration of AAA," the official said.

In the draft regulations, the commission had kept both the NAAC and the NBA out of the ambit of the UGC regulations.

"When the regulations came for final consideration of the commission at its meeting, it was decided to bring both NAAC and the NBA under the ambit of the regulations," the official said.

ಕನ್ನಡಪ್ರಭ



# ವೈದ್ಯ ಪೀಜಿ: ಕನ್ನಡಿಗರಿಗೆ ಅರ್ಧ ಸೀಟೂ ಇಲ್ಲ ಏಕೆ?

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ನೀಟ್ ಪರೀಕ್ಷೆ ಪಾಸಾದ 14 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಇನ್ನೇನು ಕೌನ್ಸೆಲಿಂಗ್ ಆರಂಭವಾಗಲಿದೆ. ಈ ಹಂತದಲ್ಲಿ ಏಕಕಾಲಕ್ಕೆ ಎರಡು ರೀತಿಯ ಹೋರಾಟಗಳು ನಡೆಯುತ್ತಿವೆ. 1. ವೈದ್ಯಕೀಯ ಪೀಜಿ ಕೋರ್ಸ್‌ಗಳಲ್ಲಿ ಕನ್ನಡಿಗ ಅಥವಾ ಕರ್ನಾಟಕದ ಅಭ್ಯರ್ಥಿಗಳಿಗೆ ಸೀಟುಗಳ ಮೀಸಲು ಬಹಳ ಕಡಿಮೆಯಿದ್ದು, ಇದನ್ನು ಹೆಚ್ಚಿಸಬೇಕು ಎಂಬ ನಮ್ಮದೇ ರಾಜ್ಯದ ವಿದ್ಯಾರ್ಥಿಗಳ ಹೋರಾಟ. 2. ಕರ್ನಾಟಕದ ಕಾಲೇಜುಗಳಲ್ಲಿ ಶೇ.50ರಷ್ಟು ಸೀಟುಗಳನ್ನು ಅಲ್ಲಿನ ಅಭ್ಯರ್ಥಿಗಳಿಗೇ ಮೀಸಲಿಟ್ಟುಕೊಂಡಿದ್ದು, 10 ವರ್ಷದಿಂದ ಕರ್ನಾಟಕದಲ್ಲಿ ವಾಸಿಸಿರುವ ಹಾಗೂ ಕರ್ನಾಟಕದಲ್ಲಿ ವೈದ್ಯಕೀಯ ಪದವಿ (ಎಂಬಿಬಿಎಸ್) ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ನೀಡುತ್ತಾರೆ. ಇದನ್ನು ಸಡಿಲಿಸಿ ಹೊರರಾಜ್ಯದವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಅನ್ಯರಾಜ್ಯದ 39 ಮಂದಿ ಸುಪ್ರೀಂಕೋರ್ಟ್‌ನಲ್ಲಿ ನಡೆಸುತ್ತಿರುವ ಹೋರಾಟ. ಇವೆರಡೂ ಹಳೆಯ ಹೋರಾಟಗಳೇ ಆಗಿದ್ದು, ಈಗ ಪ್ರವೇಶ ಪ್ರಕ್ರಿಯೆ ನಡೆಯುತ್ತಿರುವುದರಿಂದ ಮುನ್ನೆಲೆಗೆ ಬಂದಿವೆ.

ಪೀಜಿ ಕೋರ್ಸ್‌ಗಳ ಪ್ರವೇಶಕ್ಕೆ ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆ ತನ್ನದೇ ಮಾನದಂಡಗಳನ್ನು ಹೊಂದಿದೆ. ಇದು ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಕೇರಳ, ಆಂಧ್ರಪ್ರದೇಶ ಮುಂತಾದ ರಾಜ್ಯಗಳ ಮಾದರಿಯಲ್ಲಿದೆ ಎಂದು ಹೇಳಲಾಗುತ್ತದೆ. ಇದರಲ್ಲಿ ಕನ್ನಡಿಗರ ಹಾಗೂ ಕರ್ನಾಟಕದ ಹಿತಾಸಕ್ತಿಗೆ ಸಿಕ್ಕ ಆದ್ಯತೆಯನ್ನು ಅವಲೋಕಿಸಿದರೆ ನಿರಾಸೆಯೇ ಆಗುತ್ತದೆ. ಏಕೆಂದರೆ, ಶೇ.50 ಸೀಟುಗಳು ನಮ್ಮ ರಾಜ್ಯದವರಿಗೆ ಸಿಗುತ್ತವೆ ಎಂದು ತಾತ್ವಿಕವಾಗಿ ಹೇಳಲಾಗುತ್ತದೆಯಾದರೂ ವಿವಿಧ ನೀತಿ-ನಿಯಮಗಳನ್ನು ಪಾಲಿಸಿದ ಮೇಲೆ ಅಷ್ಟು ಸೀಟು ಕೂಡ ಸಿಗುವುದಿಲ್ಲ. ಉದಾಹರಣೆಗೆ, ಈ ವರ್ಷ ನಮ್ಮ ರಾಜ್ಯದಲ್ಲಿ ಸರ್ಕಾರಿ ಹಾಗೂ ಮ್ಯಾನೇಜ್‌ಮೆಂಟ್ ಕೋಟಾ ಸೇರಿದಂತೆ 4100ರಷ್ಟು ವೈದ್ಯಕೀಯ ಪೀಜಿ ಸೀಟುಗಳು ಲಭ್ಯವಿವೆ. ಅವುಗಳಿಗೆ ಹೆಚ್ಚುಕಮ್ಮಿ ಇಷ್ಟೇ ಸಂಖ್ಯೆಯ ಕನ್ನಡಿಗ ವೈದ್ಯರು ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇವರಿಗೆ ಸಿಗುವುದು ಕೇವಲ 1800ರಷ್ಟು ಸೀಟು ಮಾತ್ರ. ಅಂದರೆ, ಶೇ.50ಕ್ಕಿಂತ ಕಮ್ಮಿ. 2300ಕ್ಕೂ ಹೆಚ್ಚು ಸೀಟುಗಳನ್ನು ಪಡೆಯಲು ಅನ್ಯ ರಾಜ್ಯದವರು ಅರ್ಹರಿದ್ದಾರೆ. ಇಷ್ಟಾಗಿಯೂ ಅನ್ಯ ರಾಜ್ಯದವರು ಕರ್ನಾಟಕದ ನೀತಿ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಹೋಗಿರುವುದು ವಿಪರ್ಯಾಸವೇ ಸರಿ. ಇಲ್ಲಿ ಎರಡು ಪ್ರಮುಖ ಜವಾಬ್ದಾರಿಗಳು ಸರ್ಕಾರದ ಮೇಲಿವೆ. ಮೊದಲನೆಯದಾಗಿ, ಪರಿಣಾಮಕಾರಿಯಾಗಿ ವಾದ ಮಂಡಿಸಿ ಸುಪ್ರೀಂಕೋರ್ಟ್‌ನಲ್ಲಿ ಯಾವುದೇ ಕಾರಣಕ್ಕೂ ಕರ್ನಾಟಕಕ್ಕೆ ಸೋಲಾಗದಂತೆ ನೋಡಿಕೊಳ್ಳುವುದು. ಎರಡನೆಯದಾಗಿ, ಈ ವರ್ಷದಿಂದ ಸಾಧ್ಯವಾಗದಿದ್ದರೆ ಕನಿಷ್ಠ ಪಕ್ಷ ಮುಂದಿನ ವರ್ಷದಿಂದಾದರೂ ತಮಿಳುನಾಡಿನ ಮಾದರಿಯಲ್ಲಿ ಸ್ಥಳೀಯ ಭಾಷಿಕರಿಗೇ ಹೆಚ್ಚಿನ ವೈದ್ಯ ಪೀಜಿ ಸೀಟುಗಳು ಸಿಗುವಂತೆ ನೋಡಿಕೊಳ್ಳುವುದು. ಈ ಎರಡನೇ ಸಂಗತಿ ಬಹಳ ಮಹತ್ವದ್ದು, ಇದಕ್ಕೆ ಪ್ರಬಲ ಕಾರಣವೂ ಇದೆ.

> **ದೇಶದಲ್ಲೇ ಅತಿ ಹೆಚ್ಚು ವೈದ್ಯ ಕಾಲೇಜು, ಸೀಟುಗಳು ನಮ್ಮಲ್ಲಿದ್ದರೂ ವೈದ್ಯರ ಕೊರತೆಯನ್ನು ನೀಗಿಕೊಳ್ಳಲು ಸಾಧ್ಯವಾಗಿಲ್ಲ. ಹೀಗಿರುವಾಗ ವೈದ್ಯ ಪೀಜಿ ಸೀಟುಗಳಲ್ಲಿ ಅರ್ಧಕ್ಕಿಂತ ಹೆಚ್ಚನ್ನು ನೆರೆ ರಾಜ್ಯದವರಿಗೆ ಬಿಟ್ಟುಕೊಟ್ಟಿರುವುದು ವಿಪರ್ಯಾಸವೇ ಸರಿ.**

ದೇಶದಲ್ಲೇ ಅತಿ ಹೆಚ್ಚು ವೈದ್ಯಕೀಯ ಕಾಲೇಜುಗಳು, ವೈದ್ಯ ಪದವಿ ಹಾಗೂ ಸ್ನಾತಕೋತ್ತರ ಪದವಿ ಸೀಟುಗಳು ಕರ್ನಾಟಕದಲ್ಲಿವೆ. ಈ ಕಾಲೇಜುಗಳಿಗೆ ಮೂಲಸೌಕರ್ಯವೂ ಸೇರಿದಂತೆ ಎಲ್ಲಾ ರೀತಿಯ ನೆರವು ನಮ್ಮ ನೆಲದಿಂದ ಹಾಗೂ ಇಲ್ಲಿನ ಸರ್ಕಾರದಿಂದಲೇ ಪ್ರಾಪ್ತವಾಗುತ್ತದೆ.' ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ರಾಜ್ಯದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ವಿಪರೀತವಾಗಿದೆ. ಅದರಲ್ಲೂ ತಜ್ಞ ವೈದ್ಯರ ಕೊರತೆ ಗಂಭೀರವಾಗಿದೆ. ಇನ್ನು, ಈ ವರ್ಷ ಲಭ್ಯವಿರುವ 4100ರಷ್ಟು ವೈದ್ಯ ಪೀಜಿ ಸೀಟುಗಳಿಗೆ 10 ಸಾವಿರ ಅನ್ಯರಾಜ್ಯದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ನಮ್ಮ ರಾಜ್ಯದಲ್ಲೇ ಹುಟ್ಟಿ, ಬೆಳೆದು, ಇಲ್ಲೇ ಓದಿ, ಅನ್ಯ ರಾಜ್ಯದವರ ಜೊತೆ ನಮ್ಮವರು ವೈದ್ಯ ಪೀಜಿ ಸೀಟುಗಳಿಗಾಗಿ ಗುದ್ದಾಡಬೇಕೇ? ಮೇಲಾಗಿ, ವೈದ್ಯ ಪೀಜಿ ಕೋರ್ಸ್ ಮುಗಿಸಿದ ಕನ್ನಡಿಗರೇ ಮುಂದೆ ಇಲ್ಲಿ ಸೇವೆ ಸಲ್ಲಿಸುವುದು ಖಾತ್ರಿ, ಇಲ್ಲದಿರುವಾಗ ಹೊರ ರಾಜ್ಯದಿಂದ ಬಂದವರು ಕೋರ್ಸ್ ಮುಗಿದ ಮೇಲೆ ಇಲ್ಲಿರುತ್ತಾರೆಯೇ? ಕಡ್ಡಾಯ ಸೇವೆಗಾಗಿ ಸರ್ಕಾರ ಏನೇ ನಿಯಮ ರೂಪಿಸಿದರೂ ಪ್ರಯೋಜನವಾಗುತ್ತಿಲ್ಲ. ಹೀಗಾಗಿ ವೈದ್ಯಕೀಯ ಪದವಿ ಹಾಗೂ ಪೀಜಿ ಕೋರ್ಸ್‌ಗಳಲ್ಲಿ ನೆರೆ ರಾಜ್ಯದವರ ಒತ್ತಡವನ್ನು ಸರ್ಕಾರ ನೀಗಿಕೊಳ್ಳಲೇಬೇಕಿದೆ.